324 (152) ಶ್ರೀ. ರಾಮಸ್ವಾಮಿ ಎ.ಟಿ:– ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ನೀರಾವರಿ ನಿಗಮದಲ್ಲಿ ಅವಶ್ಯಕ ಕಾಮಗಾರಿಗಳನ್ನು ಮಾಡಿಸಲು ಹಣಕಾಸಿನ ತೊಂದರೆಯಿರುವುದು ಸರ್ಕಾರಕ್ಕೆ ತಿಳಿದಿಲ್ಲವೆ

ಆ) ಕಾವೇರಿ ನೀರಾವರಿ ನಿಗಮದಲ್ಲಿನ ಬಹುತೇಕ ಕಾಮಗಾರಿಗಳನ್ನು ಮಾಡದಂತೆ, ಸ್ಥಗಿತಗೊಳಿಸಿರುವುದು ಸರ್ಕಾರಕ್ಕೆ ತಿಳಿದಿದೆಯೆ

ಇ) ಸರ್ಕಾರ ಕಾಮಗಾರಿಗಳನ್ನು ಮಾಡಲು ಏನು ಕ್ರಮ ಕೈಗೊಂಡಿದೆ

ಈ) ಕಾವೇರಿ ನೀರಾವರಿ ನಿಗಮದಲ್ಲಿ ಪಾವತಿಗಾಗಿ ಬಾಕಿ ಇರುವ ಬಿಲ್ಲಿನ ಹಣ ಎಷ್ಟು

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಅವಶ್ಯಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಂಪನ್ಮೂಲವನ್ನು ಕ್ರೋಢೀಕರಿಸುವ ಸಲುವಾಗಿ ಸರ್ಕಾರದ ಖಾತರಿಯನ್ನು ನೀಡಲಾಗಿದೆ.

ಆ) ಸಂಪನ್ಮೂಲ ಲಭ್ಯತೆ ಅನುಗುಣವಾಗಿ ನೀರಾವರಿ ಸಾಮರ್ಥ್ಯವನ್ನು ಕಲ್ಪಿಸುವ ಕಾಮಗಾರಿಗಳನ್ನು ಅದ್ಯತೆ ಮೇರೆಗೆ ಕೈಗೆತ್ತಿಕೊಳ್ಳಲಾಗುತ್ತಿದೆ.

ಇ) ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಂಪನ್ಮೂಲ ಕ್ರೋಢೀಕರಿಸಲು ಸರ್ಕಾರದ ಖಾತರಿ ನೀಡಲಾಗಿದೆ.

ಈ) ದಿ:31–12–04ರ ಅಂತ್ಯಕ್ಕೆ ಕಾವೇರಿ ನೀರಾವರಿ ನಿಗಮದಲ್ಲಿ ಪಾವತಿಗಾಗಿ ಬಾಕಿ ಇರುವ ಬಿಲ್ಲಿನ ಮೊತ್ತ ರೂ.324.13 ಕೋಟಿಗಳು.

325 (33) ಶ್ರೀ ರವಿ (ಚಿಕ್ಕಮಗಳೂರು):– ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿ.ಮೀ. ಲೆಕ್ಕದಲ್ಲಿ ಹಾಲಿ ಇರುವ ಸಾರಿಗೆ ಸಂಸ್ಥೆಯ ಸರಾಸರಿ ಪ್ರಯಾಣದರ ಎಷ್ಟು?

ಆ) ಪ್ರಯಾಣ ದರ ಪದೇ ಪದೇ ಹೆಚ್ಚಳಕ್ಕೆ ಕಾರಣಗಳೇನು?

ಇ) ಈ ನಿಟ್ಟಿನಲ್ಲಿ ಸರ್ಕಾರದ ಚಿಂತನೆಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಿ.ಮೀ. ಲೆಕ್ಕದಲ್ಲಿ ಸರಾಸರಿ ಪ್ರಯಾಣದರವು ಪ್ರಯಾಣಿಕರ ಕಿ.ಮೀ. ಒಂದಕ್ಕೆ 36.01 ಪೈಸೆ ಇರುತ್ತದೆ.

ಆ) ಇಂಧನ ದರಗಳು ಪದೇ ಪದೇ ಹೆಚ್ಚಾಗುತ್ತಿರುವುದರಿಂದ ಹಾಗೂ ಸಂಸ್ಥೆಯ ನೌಕರರ ವೇತನ ಪರಿಷ್ಕರಣೆಯಿಂದ ಸಂಸ್ಥೆಯ ಕಾರ್ಯಾಚರಣೆ ವೆಚ್ಚವು ಹಚ್ಚಾಗುತ್ತದೆ, ಈ ರೀತಿ ಹೆಚ್ಚಾಗುವ ಕಾರ್ಯಾಚರಣೆಯ ವೆಚ್ಚವನ್ನು ಸರಿದೂಗಿಸಲು ಪ್ರಯಾಣ ದರಗಳನ್ನು ಪರಿಷ್ಕರಿಸಲಾಗಿದೆ.

ಇ) ಪ್ರಯಾಣ ದರಗಳನ್ನು ಆದಷ್ಟು ಕಡಿಮೆ ಮಟ್ಟದಲ್ಲಿಡುತ್ತಾ, ಸಂಸ್ಥೆಯಲ್ಲಿ ಹೆಚ್ಚಾಗುತ್ತಿರುವ ವೆಚ್ಚವನ್ನು ಸರಿದೂಗಿಸಲು ಪ್ರಯತ್ನಿಸಲಾಗುತ್ತಿದೆ.

326 (37) ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು):– ಸನ್ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?